ಮದುವೆಯಾಗುವುದಾಗಿ ಹಟ ಹಿಡಿದೆ.

“ಯಾವ ಜಾತಿಯವನು?”

“ಗೊತ್ತಿಲ್ಲ...”

“ಇನ್ನೇನು ಕರ್ಮ ಲವ್ ಮಾಡುತ್ತಿದ್ದೀಯಾ? ಸುಮ್ಮನೆ ನಾನು ಹೇಳಿದ ಹುಡುಗನನ್ನು ಮದುವೆಯಾಗು; ನಮಗೂ ಅನುಕೂಲ...”

ಮಾತಿಗೆ ಮಾತು... ಸಣ್ಣ ಜಗಳ... ಅಪ್ಪನ ಬೆಂಬಲಕ್ಕೆ ಅಮ್ಮ... ಅಳುತ್ತ ಕುಳಿತ ತಂಗಿಯರು... ನಾನು ಸಿಟ್ಟಿನಿಂದ ಧಾರವಾಡಕ್ಕೆ ಹೊರಟೆ. ಎಲ್ಲ ಯೋಜನೆಗಳೂ ಸಿದ್ಧವಾಗಿದ್ದವು. ಮುಂದಿನ ಒಂದು ವಾರದೊಳಗೆ ನಾನು ರಾಂಚಿಯಲ್ಲಿದ್ದೆ.

ಮದುವೆಯಾಗದಿದ್ದರೂ ರಂಜಿತ್ ನನ್ನ ಗಂಡ. ನಾನು ಆತನ ಪ್ರೀತಿಯ ಹೆಂಡತಿ. ಗಂಡ ಬ್ಯಾಂಕ್ ಉದ್ಯೋಗಿ. ನಾನು ಡಬಲ್ ಮಾಸ್ಟರ್ ಡಿಗ್ರಿ ಹೋಲ್ಡರ್. ನಾವಿಬ್ಬರೇ ಮನೆಯಲ್ಲಿ. ಸ್ವರ್ಗಕ್ಕೆ ಮೂರೇ ಗೇಣು.

ಮರು ವರ್ಷವೇ ಮನೆಗೆ ಇನ್ನೊಬ್ಬಳು ಅತಿಥಿಯ ಆಗಮನ, ಮಗಳ ರೂಪದಲ್ಲಿ.

★★★

ಆ ದಿನ ಸುನಯನಳ ಬಳಿಯಲ್ಲಿ ಮಾತನಾಡುತ್ತಲೇ ತರಕಾರಿ ಖರೀದಿಸಿದೆ. 110 ರೂಪಾಯಿ ಆಯಿತು. ಪರ್ಸ್‌ನಿಂದ ಹಣ ತೆಗೆದುಕೊಟ್ಟು ಮನೆಯ ಕಡೆಗೆ ಹೆಜ್ಜೆ ಹಾಕಿದೆ. ಸ್ವಲ್ಪ ದೂರ ಬಂದ ನಂತರ ಯಾರೋ ಹಿಂದಿನಿಂದ ನನ್ನನ್ನು ಕೂಗಿದಂತಾಯಿತು. ತಿರುಗಿ ನೋಡಿದೆ; ಸುನಯನ! ಸ್ವಲ್ಪ ಓಡುವ ನಡಿಗೆಯಲ್ಲಿ ಬರುತ್ತಿದ್ದಳು. ನಿಂತೆ. ಆಕೆ ನನ್ನ ಸಮೀಪಕ್ಕೆ ಬಂದು,

“ಅಕ್ಕಾ, (ಆಕೆ ಹಾಗೆ ಕರೆದಾಗ ಒಮ್ಮೆ ನನ್ನ ತಂಗಿಯಂದಿರ ನೆನಪಾಯಿತು. ಏನು ಮಾಡುತ್ತಿದ್ದಾರೋ ಏನೋ ಪಾಪ!) ತಗೊಳ್ಳಿ 100 ರೂಪಾಯಿ...”

ನಾನು ಆಶ್ಚರ್ಯದಿಂದ ಕೇಳಿದೆ, “ಏನಾಯಿತು... ನನಗೇಕೆ ನೂರು ರೂಪಾಯಿ ನೀಡುತ್ತಿದ್ದೀಯಾ?”

“ನೀವು ತೆಗೆದುಕೊಂಡ ತರಕಾರಿ ಬೆಲೆ 110 ರೂಪಾಯಿ. ನೀವು ಹಣ ನೀಡುವಾಗ ನೂರರ ಎರಡು ನೋಟುಗಳು ಅಂಟಿಕೊಂಡಿದ್ದವು. ನೀವು ನೋಡಲಿಲ್ಲ; ನಾನೂ ಆಗ ಗಮನಿಸಲಿಲ್ಲ. ತಗೊಳ್ಳಿ.”

ಅವಳ ಪ್ರಾಮಾಣಿಕತೆ ಕಂಡು ನನಗೆ ಆಶ್ಚರ್ಯ ಮತ್ತು ಆನಂದವಾಯಿತು. ಈ ಕಾಲದಲ್ಲಿಯೂ ಇಂಥವರು ಇರುತ್ತಾರೆಯೇ? ಆಶ್ಚರ್ಯ!

“ಪರವಾಗಿಲ್ಲ, ನೀನೇ ಇಟ್ಟುಕೋ. ತೊಂದರೆ ಇಲ್ಲ.”

“ಯಾಕಕ್ಕ, ನಾನು ನಿಮ್ಮ ದುಡ್ಡನ್ನು ಇಟ್ಟುಕೊಳ್ಳೋದಾ? ‘ಸಿಂಗ ಬೊಂಗಾ’ (ದೇವರು) ಮೆಚ್ಚಲ್ಲ...”

ನಾನು ಆ ನೂರು ರೂಪಾಯಿಯನ್ನು ತೆಗೆದುಕೊಳ್ಳುವವರೆಗೂ ಆಕೆ ಬಿಡಲಿಲ್ಲ.

“ಬರ್ತೀನಕ್ಕಾ” ಎಂದು ಹೇಳಿ ಆಕೆ ನನಗೆ ಕೈಮುಗಿದಾಗ ಆಕೆಯ ಕಣ್ಣುಗಳು ನೂರಾರು ಮಾತುಗಳನ್ನು ಆಡಿದ್ದವು.

★★★

“ಡಾರ್ಲಿಂಗ್, ಮ್ಯಾಚ್ ಬಾಕ್ಸ್ ಪ್ಲೀಸ್...”

ರಂಜಿತ್ ಅಂದು ಕುಡಿದು ಚಿತ್ತಾಗಿದ್ದ. ಇತ್ತೀಚಿನ ದಿನಗಳಲ್ಲಿ ಆತ ಕುಡಿಯುವುದು, ಸಿಗರೇಟು ಸೇದುವುದು ಅತಿಯಾಗಿತ್ತು. ಒಂದಾನೊಂದು ಕಾಲದಲ್ಲಿ ಆತ ಸಿಗರೇಟು ಸೇದುವ ಸ್ಟೈಲ್‌ಗೆ